## ನೋಡಿದಿರಾ ಹಳದಿ ಕಲ್ಲಂಗಡಿ?



ಸಾಮಾನ್ಯವಾಗಿ ಬೇಸಿಗೆಯಲ್ಲಿ ಕಂಡು ಬರುವ ಅತ್ಯಧಿಕ ನೀರಿನಾಂಶವನ್ನು ಹೊಂದಿರುವ ಕಲ್ಲಂಗಡಿಗಳು ನೀರಿನ ದಾಹವನ್ನು ತಣಿಸುವಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತವೆ. ಅಚ್ಚರಿ ಏನೆಂದರೆ ನಾವು ಮಾರುಕಟ್ಟೆಯಲ್ಲಿ ಕೆಂಪು ಬಣ್ಣದ ಕಲ್ಲಂಗಡಿಗಳನ್ನು ಕಾಣುತ್ತೇವೆ. ಆದರೆ ಕಲಬುರ್ಗಿ ಜಿಲ್ಲೆಯ ಆಳಂದ ತಾಲ್ಲೂಕಿನ ಕೊರಳ್ಳಿಯ ಯುವ ರೈತ ಬಸವರಾಜ ಶ್ರೀಕಾಂತ ಪಾಟೀಲ ಕೃಷಿಯತ್ತ ಆಸಕ್ತಿ ಬೆಳೆಸಿಕೊಂಡು ಈ ಹೊಸ ಪ್ರಯೋಗ ಮಾಡಿ ಯಶಸ್ವಿಯಾಗಿದ್ದಾರೆ. ಕೆಂಪು ಕಲ್ಲಂಗಡಿ ಬೆಳೆಯುವ ಹಾಗೆಯೇ ಇದನ್ನು ಬೆಳೆದಿದ್ದಾರೆ. ಬೇಡಿಕೆಯಿದ್ದು, ಹೊರರಾಜ್ಯಗಳಿಗೆ ರಫ್ತಾಗುತ್ತಿದೆ. ಆನ್‌ಲೈನ್‌ನಲ್ಲಿ ಈ ಹಳದಿ ಕಲ್ಲಂಗಡಿ ಕಣ್ಣಿಗೆ ಬಿದ್ದುದರ ಪರಿಣಾಮವಾಗಿ ಅದನ್ನು ನರ್ಸರಿಯಲ್ಲಿ ತಂದು ಬೆಳೆಸಿದ್ದಾರೆ. ಈಗ ಎಕರೆಗಟ್ಟಲೆ ಹಳದಿ ಕಲ್ಲಂಗಡಿಯನ್ನು ಬೆಳೆಯಲು ಮುಂದಾಗಿದ್ದಾರೆ.

—ಈರಣ್ಣ ಬೆಂಗಾಲಿ, ರಾಯಚೂರು

## ಪರಿಸರ ಸ್ನೇಹಿ ಆಟೊ!



ಈ ಆಟೊದಿಂದ ಶಬ್ದ ಮಾಲಿನ್ಯವಿಲ್ಲ, ಹೊಗೆ ಉಗುಳುವುದಿಲ್ಲ, ಮುಚ್ಚು ಮರೆಯೂ ಇಲ್ಲ! ಸಂಜೆ ಹೊತ್ತಲ್ಲಿ ತಂಗಾಳಿಗೆ ಮೈಯೊಡ್ಡಿ ಪ್ರವಾಸಿ ತಾಣವನ್ನು ಸುತ್ತಾಡಲು ಅನುಕೂಲಕರವಾದ ತೆರೆದ ಆಟೋ! ಇದು ಪಶ್ಚಿಮ ಬಂಗಾಳದ ಉತ್ತರ ಭಾಗದಲ್ಲಿರುವ ಸಿಲಿಗುರಿ ನಗರದ ಬಾಗ್ಡೋಗ್ರ ವಿಮಾನ ನಿಲ್ದಾಣ ರಸ್ತೆಯಲ್ಲಿ ಕಂಡುಬಂದಿದ್ದು. ಇತ್ತೀಚೆಗೆ ಪ್ರವಾಸಕ್ಕೆ ಹೋದಾಗ ಈ ಆಟೊದಲ್ಲಿ ಪಯಣಿಸಿದ ಅನುಭವ ಹಿತ ಅನಿಸಿತು. ಆರು ಜನ ಆರಾಮಾಗಿ ಕುಳಿತುಕೊಳ್ಳಬಹುದು. ಸರಕು ಸಾಗಾಣೆಗೂ ಇದನ್ನು ಬಳಸಬಹುದು. ಮುಂದಿನ ದಿನಗಳಲ್ಲಿ ನಮ್ಮ ಕಡೆಯ ಬೀದಿಗೂ ಬರಬಹುದು.

—ನಿಖಿತಾ ಶಶಾಂಕ್ ಭಟ್, ಹೊಸನಗರ

## ಸಿಳ್ಳೆ ಹಾಕುವ ಪಿಕಳಾರ



ಮನುಷ್ಯನೆಡೆಗೆ ಅಂಜಿಕೆಯಿಲ್ಲದೇ ಬರುವ ಮನೋಭಾವದ ಪಿಕಳಾರ ಹಕ್ಕಿಗಳು ಮೈನಾದ ಗಾತ್ರದವು. ಆಗ್ನೇಯ ಏಷ್ಯಾದ ಹಲವು ಭಾಗಗಳಲ್ಲಿ ಗಿಳಿಗಳಂತೆ ಪಂಜರದಲ್ಲಿ ಸಾಕುತ್ತಾರೆ. ಪಿಕಳಾರದಲ್ಲಿ ಏಳು ಪ್ರಭೇದಗಳಿವೆ. ಇಂಗ್ಲಿಷ್‌ನಲ್ಲಿ 'ರೆಡ್ ವೆಂಟೆಡ್ ಬುಲ್ ಬುಲ್' ಎನ್ನುತ್ತಾರೆ. ಪೈಕ್ನೋನೋಟಿಡೇ ಕುಟುಂಬಕ್ಕೆ ಸೇರಿದ ಪಿಕಳಾರದ ವೈಜ್ಞಾನಿಕ ಹೆಸರು ಪೈಕ್ನೋನೋಟಸ್ ಕ್ಯಾಫರ್.

ಕಿಬ್ಬೊಟ್ಟೆಯ ಜಾಗದಲ್ಲಿರುವ ಕೆಂಪು ಬಣ್ಣ ಇರುವುದರಿಂದ ಸುಲಭವಾಗಿ ಗುರುತಿಸಬಹುದು. ಕಪ್ಪು ಬಣ್ಣದ ಸಣ್ಣ ಜುಟ್ಟು, ಬಿಳಿ– ತಿಳಿ ಕಂದು ಎದೆ, ಕಂದು ಬಣ್ಣದ ಬೆನ್ನು ಕಲಾವಿದ ಬಿಡಿಸಿದ ದೃಶ್ಯ ಕಾವ್ಯದಂತೆ ಗೋಚರಿಸುತ್ತವೆ. ಉದ್ದ ಬಾಲದ ಕೆಳಗಿನ ಪುಕ್ಕಗಳ ಬುಡದಲ್ಲಿ ಕೆಂಪು ಬಣ್ಣ ಎದ್ದು ಕಾಣುತ್ತದೆ. ಪಶ್ಚಿಮ ಘಟ್ಟದ ಅರಣ್ಯಗಳು, ತೋಟಗಳಲ್ಲಿ ಸುಲಭವಾಗಿ ನೋಡಬಹುದು. ಬೆಳಗಿನ ಜಾವ ಸಿಳ್ಳೆ ಹಾಕುತ್ತ ಹಾಡುವುದನ್ನು ಕೇಳಿದರೆ ಮನಸ್ಸಿಗೆ ಮುದವೆನಿಸುತ್ತದೆ. ಫೆಬ್ರುವರಿ– ಜೂನ್ ಸಂತಾನೋತ್ಪತ್ತಿಯ ಕಾಲ. ತೆಳುವಾದ ಬೇರುಗಳಿಂದ, ಬಟ್ಟಲಿನಾಕಾರದ ಗೂಡು ಕಟ್ಟುತ್ತವೆ. ಗುಲಾಬಿ ಮಿಶ್ರಿತ ಬಿಳಿ ಬಣ್ಣದ 23 ಮೊಟ್ಟೆಗಳನ್ನಿಡುತ್ತದೆ.

ಪ್ರಕಾಶ ಎಸ್. ಮನ್ನಂಗಿ